ಮಾಮಕ್ಕು ಭಾಪುರೇ ಭಳಿರೇ ಹನುಮಂತ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page no. 30.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page no. 160.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 452.
4. **Note:** The wordings are as per the book in Ref. 1 above. The wordings in the book in Ref. 2 above and that of the singer are matching, except few differences, which are marked in yellow highlights.

ರಾಗ ಮೋಹನ ಅಟ ತಾಳ

ಮಾಮಕ್ಕು ಬಾಪುರೆ ಭಳಿರೆ ಹನುಮಂತ || ಪ ||
ರಾಮಪದ ಸೇವಿಪ ವೀರ ಹನುಮಂತ || ಅಪ ||

ಹುಟ್ಟುದಲೆ ಹೊನ್ನ ಕಚ್ಚುಟವ ಕುಂಡಲವೆರಸಿ
ನಿಷ್ಠೆಯಲಿ ರಘುಪತಿಯ ಪಾದವನೆ ಕಂಡು
ದಿಟ್ಟಿ ಹರಿದಾಡಿ ಮನಮುಟ್ಟಿ ಪೂಜಿಸಲಜನ
ಪಟ್ಟಕನುವಾದ ಸಿರಿವಂತ ಹನುಮಂತ || 1 ||

ಅಂಬರಕೆ ಪುಟನೆಗೆದು ಅಂಬುಧಿಯ ನೆರೆದಾಟಿ
ಕುಂಭಿನಿಯ ಮಗಳಿಗುಂಗುರವನಿತ್ತು (ಮಗಳಿಗುಂಗುರವನಿತ್ತೆ)
ಬೆಂಬಿಡದೆ ಲಂಕೆಯನು ಸಂಭ್ರಮದಿ ಸಖಗಿತ್ತೆ
ಗಂಭೀರ ವೀರಾಧಿವೀರ ಹನುಮಂತ || 2 ||

ಅತಿ ದುರುಳ ರಕ್ಕಸನು ರಥದ ಮೇಲಿರಲು ರಘು-
ಪತಿಯು ಪದಚರಿಯಾಗಿ ನಿಂತಿರಲು ನೋಡಿ
ಪೃಥಿವಿ ಗಗನಕೆ ಬೆಳೆದು ರಥವಾದೆ ಒಡೆಯನಿಗೆ
ಅತಿ ಭಯಂಕರ ಸತ್ವವಂತ ಹನುಮಂತ || 3 ||

ಒಡೆಯ ಊಣ ಕರೆಯಲಂದಡಿಗಡಿಗೆ ಕೈ ಮುಗಿದು
ದೃಢ ಭಕುತಿಯಿಂದ ಮೌನದಲಿ ಕುಳಿತು
ಎಡೆಯ ಕೊಂಡೆದ್ನೋಡಿ ಗಗನದಲಿ ಸುರರಿಗೆ
ಕೊಡುತ ಸವಿದುಂಡ ಗುಣವಂತ ಹನುಮಂತ ‖ 4 ‖

ಪ್ರಥಮದಲಿ ಹನುಮಂತ ದ್ವಿತೀಯದಲಿ ಕಲಿಭೀಮ
ತೃತೀಯದಲಿ ಗುರು ಮಧ್ವ ಮುನಿಯು ಎನಿಸಿ
ಪ್ರತಿಯಿಲ್ಲದಲೆ ಮೆರೆದೆ ಪುರಂದರವಿಠಲನ
ಸುತ್ತ (ಭಕ್ತ) ನಿನಗಾರು ಸರಿ ವಿಜಯ ಹನುಮಂತ ‖ 5 ‖

ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:

ಮಾ ಮರು ಭಾಪುರೆ – ಮರಾಠೀ ಪದ; ಕನ್ನಡದಲ್ಲಿ 'ಭಲೆ ಭಲೆ', ಭಳಿರೆ.

ಹುಟ್ಟತಲೆ... – ಹನುಮಂತನು ಹುಟ್ಟುವಾಗಲೇ ಬಂಗಾರದ ಕಾಚಾ (ಲಂಗೋಟಿ, ಕೌಪೀನ, ಕಚ್ಚುಟ) ಮತ್ತು ಕರ್ಣಕುಂಡಲಗಳನ್ನು ಧರಿಸಿದ್ದನೆಂದು ನಂಬಿಕೆ.

ದಿಟ್ಟಿ ಹರಿದಾಡಿ – ದೃಷ್ಟಿಯನ್ನು ಅವನಲ್ಲೇ ನೆಲೆಗೊಳಿಸಿ.

ಅಜನ ಪಟ್ಟಕೆ – ಎರಡನೆಯ ಕಕ್ಷೆಯಲ್ಲಿರುವ ಹನುಮಂತನು ಮುಂಬರುವ ಕಲ್ಪದಲ್ಲಿ ಅದೇ ಕಕ್ಷೆಯಲ್ಲಿ ಉತ್ತಮಸ್ಥಾನವಾದ ಬ್ರಹ್ಮಪದವಿಯನ್ನು ಪಡೆಯುವನೆಂದು ನಂಬಿಕೆ.

ಕುಂಭಿಣಿಯ ಮಗಳಿಗೆ – ಭೂಮಿಯ ಮಗಳಾದ ಸೀತೆಗೆ.

ಸಖಗಿತ್ತೆ – ವಾಯುವಿನ ಸ್ನೇಹಿತನೆಂದರೆ ಅಗ್ನಿ, ಬೆಂಕಿ; ಲಂಕೆಯನ್ನು ಸುಟ್ಟೆ ಎಂದರ್ಥ.

ಅತಿ ದುರುಳ ರಕ್ಕಸನು – ರಾವಣನು ಯುದ್ಧಮಾಡುವಾಗ ರಥವನ್ನೇರಿದ್ದು, ಎದುರಾಳಿಯಾದ ರಾಮನು ಕಾಲಮೇಲೆ ನಿಂತಿರಲು, ಹನುಮಂತನು ಎತ್ತರಕ್ಕೆ ಬೆಳೆದು ರಾಮನನ್ನು ತನ್ನ ಹೆಗಲ ಮೇಲೇರಿಸಿಕೊಂಡನೆಂದು ಕತೆ.

ಒಡೆಯ ಉಣಕರೆಯಲು – ರಾಮನು ಅಯೋಧ್ಯೆಗೆ ಹಿಂದಿರುಗಿ ವಿಜಯೋತ್ಸವವನ್ನು ಆಚರಿಸಿದಾಗ ಹನುಮಂತನನ್ನು ಸಹ ಪಂಕ್ತಿಭೋಜನಕ್ಕೆ ಕರೆದನೆಂದೂ, ಸೇವಕನಾದ ತನ್ನ ಯೋಗ್ಯತೆಗೆ ಮೀರಿದ ಗೌರವವೆಂದು ಬಗೆದು, ಆದರೆ ಸ್ವಾಮಿಯ ಕರೆಯನ್ನು ಮನ್ನಿಸಿ, ಅವನಿತ್ತ ಭಕ್ಷ್ಯಗಳನ್ನು ಮಹಾ ಪ್ರಸಾದವೆಂದು ಕೊಂಡೊಯ್ದು, ಅದು ದೇವಯೋಗ್ಯವಾದುದೆಂದು ದೇವತೆಗಳಿಗೆ ಹಂಚಿ, ತಾನೂ ಉಂಡನೆಂಬುದು ಸಂದರ್ಭ.

ಪ್ರತಿಯಿಲ್ಲದೆಲೆ – ಎಣೆಯಿಲ್ಲದಂತೆ.

Classification: Keerthane
Ankita: purandara vittala
Location: NA
Category: Hanuma Stuti, Pooja Tatva
Sub-Category: hanuma, rama, langoti, puje, akasha, lanka, vira, bhumi, sura, bhima, madhva, muni, Vijaya
Pravachana: NA
Explanation: NA